consider whether they should insist on fifteen days' notice. One view was that the answers could not be got ready. That point can be examined.

As regards the second point raised about non-official business, it will certainly be provided in due course. Let not anybody feel that any of the rights with regard to non-official business will be taken away. It must, however, be remembered that the Budget has to be passed.

Sri S. SHIVAPPA.—Sir, the Hon'ble Chief Minister was pleased to write to the Speaker, when the legislature was in session, that he had been to Delhi. Going to Delhi when the legislature was in session must have got some significance. Since the Leader of the House is responsible to this House, I request him to take this House into his confidence and tell us why and on what mission he had gone there so that we may know what was the purpose of his visit to Delhi.

Sri S. R. KANTHI.—Sir, I am aware that the Ministers will have to be present in the House and unless they have some urgent work outside, they should not absent themselves from the House. I wrote to you, Sir, that I had to go to Delhi on a very urgent matter of an official character and I am very sorry I cannot inform the House about the details of my visit or about the actual official business for which I went. I can only say that my going there was necessitated by the circumstances. So, I went there. Beyond that, I cannot disclose anything.

DEMANDS FOR GRANTS IN ADVANCE (VOTE ON ACCOUNT) FOR THE YEAR 1962-63.

(Debate continued)

ಶ್ರೀಮತಿ ಬನವರಾಜೇಶ್ವರಿ (ಮಾನ್ವಿ).—ಸ್ವಾಮಿ, ನಾನು ನಿನ್ನೆ ರಾಯಚೂರ್ ರಿಸರ್ಚ್ ಸ್ಪೇಷ್ಷ ಬಗ್ಗೆ ಹೇಳುತ್ತಿದ್ದೆ. ಅದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಮಂತ್ರಿಗಳಿಗೆ ಹೇಳುತ್ತಿದ್ದೆ, ಈಗ ನಮ್ಮ ದೇಶದಲ್ಲಿ ಎಷ್ಟೋ ಕಡೆ ರಿಸರ್ಚ್ ಸ್ಪೇಷ್ಷಗಳಿವೆ. ಆದರೆ ಯಾವ ರಿಸರ್ಚ್ ಸ್ಪೇಷ್ಷನ್ನಿನಲ್ಲಿಯೂ "Soil Testing Machine" ಇಡುವ ಏರ್ಪಾಡು ಮಾಡಿಲ್ಲ. ಪದೇ ಪದೇ ನಾವು ರಾಯಚೂರ್ ರಿಸರ್ಚ್ ಸ್ಪೇಷ್ಷನ್ನಿಗೆ ಒಂದು "Soil Testing Machine" ತರಿಸಿಕೊಡಬೇಕೆಂದು ಹೇಳುತ್ತಿದ್ದೇವೆ. ರೈತರುಗಳಿಗೆ ಹಣ ಸಾಲಕೊಟ್ಟು ಟ್ರಾಕ್ಟರುಗಳನ್ನು ಕೊಟ್ಟು, ಅನೇಕರೀತಿಯಲ್ಲಿ ಸಹಾಯಮಾಡುತ್ತಿದ್ದೀರಿ. ನೂರಾರು ಟ್ರಾಕ್ಟರುಗಳು ನಮ್ಮ ಜಿಲ್ಲೆಯಲ್ಲಿವೆ. ಇಷ್ಟಿದ್ದರೂ ಒಂದು ಸರ್ವಿಸ್ ಸ್ಟೇಷ್ಷ ಕೊಟ್ಟಿಲ್ಲ. ಆದ್ದರಿಂದ ಎಲ್ಲೆಲ್ಲಿ ಟ್ರಾಕ್ಟರುಗಳ ಸಂಖ್ಯೆ ಹೆಚ್ಚಾಗಿದೆ, ಅಲ್ಲಿಗೊಂದು ಸರ್ವಿಸ್ ಸ್ಟೇಷ್ಷ ಇಟ್ಟು ಅನುಕೂಲಮಾಡಬೇಕೆಂದು ಹೇಳುತ್ತೇನೆ; ಇಲ್ಲದಿದ್ದರೆ ಟ್ರಾಕ್ಟರುಗಳನ್ನಿಟ್ಟುಕೊಂಡಿರುವ ರೈತರಿಗೆ ಅನಾನುಕೂಲಮಾಡಿದಂತಾಗುತ್ತದೆ.

ಆ ಮೇಲೆ ಒಕ್ಕಲುತನವನ್ನು ಅಭಿವೃದ್ಧಿ ಮಾಡಬೇಕೆಂದು ಹೇಳಿ ತಾವು ಒಳ್ಳೆಯ ಬೀಜಗಳನ್ನು ರೈತರಿಗೆ ಹಂಚುತ್ತಿದ್ದೀರಿ. ಆದರೆ ರೈತರುಗಳು ಅವುಗಳನ್ನು ಉಪಯೋಗಿಸದೇ ಹಳೆಯ ಬೀಜಗಳನ್ನೇ ಉಪಯೋಗಿಸುತ್ತಾರೆ. ಇದನ್ನು ತಡೆಗಟ್ಟುವುದಕ್ಕಾಗಿ "Seed Act" ಮುಂತಾದುವುಗಳನ್ನು ಜಾರಿಗೆ ತರಬೇಕೆಂದು ನಾನು ಹೇಳುತ್ತೇನೆ.

ಸೋಷಿಯಲ್ ವೆಲ್‌ಫೇರ್ ಬಗ್ಗೆ ಇಲ್ಲಿಯವರೆಗೂ ಹರಿಜನರ ಮತ್ತು ಗಿರಿಜನರ ಅಭಿವೃದ್ಧಿಗಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಬೇಕಾದಷ್ಟು ಅನುಕೂಲಗಳನ್ನು ಮಾಡಿದ್ದೀರಿ. ಆದರೆ, ಈ ಸಂದರ್ಭದಲ್ಲಿ ಮನೆ ಕಟ್ಟುವುದಕ್ಕೆಂದು ೨೦೦-೩೦೦ ರೂಪಾಯಿಗಳನ್ನು ಕೊಡುತ್ತಿರುವುದು ಏನೇನೂ ಸಾಲದು. ಹಣ ಕೊಟ್ಟರೆ ದುರಪಯೋಗವಾಗುತ್ತದೆಂದ ತಿಳಿದು ಇದನ್ನು ಸಾಲದ ರೂಪವಾಗಿ ಈಗ ತಾವು ಕೊಡುತ್ತಿದ್ದೀರಿ. ಆದರೂ, ಅವರು ಸಾಲವನ್ನು ತೆಗೆದುಕೊಳ್ಳಬೇಕಾದರೆ, ಷೇರುಗಳನ್ನು ಕೊಂಡುಕೊಂಡು ಅದರ ಮೇಲೆ ಸಾಲಕ್ಕೆ ಅರ್ಜಿಹಾಕಿ ಪಡೆಯುವ ಸ್ಥಿತಿಯಲ್ಲಿದ್ದಾರೆಯೇ ಎಂಬುದನ್ನು ನೀವೇ ಆಲೋಚನೆ ಮಾಡಿ. ನನಗೆ ಗೊತ್ತಿರುವ ಹಾಗೆ ನಮ್ಮ ಪ್ರದೇಶದಲ್ಲಿ ಒಬ್ಬರಿಗೂ ಈ ಹಣ ಸಹಾಯ ದೊರೆತಿಲ್ಲ. ಇನ್ನು ಮುಂದಾದರೂ ಈ ಪದ್ಧತಿಯನ್ನು ವಜಾಮಾಡಿ. ನೀವು ಕೊಡುವುದು 400 ರೂಪಾಯಿಯಾಗಿರಲಿ, ಅಥವಾ 500 ರೂಪಾಯಿಯಾಗಿರಲಿ, ಕೊಡಬೇಕಾದ ಹಣವನ್ನು "Rural Housing Cell" ಬಗ್ಗೆ ಕೊಟ್ಟು ಗ್ರಾಮಗಳಲ್ಲಿ ಮನೆ ಕಟ್ಟಿಸಿಕೊಟ್ಟರೆ ಅನುಕೂಲವಾಗುತ್ತದೆ. ನಮ್ಮ ಸೋಷಿಯಲ್ ವೆಲ್‌ಫೇರ್ ಮಂತ್ರಿಗಳು ಬಹಳ ಅನುಭವಶಾಲಿಗಳು, ಬಡ ಜನರ ಕಷ್ಟ ಸುಖಗಳನ್ನು ಅರಿತಿರುವವರು, "Economic Aid", ಎಂದು ಗಾಡಿ, ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೆಂದು 1,000 ರೂಪಾಯಿಗಳನ್ನಿಟ್ಟಿದ್ದೀರಿ. ತಾವು ಕೊಡುವ ಹಣ ಒಬ್ಬಬ್ಬರಿಗೆ ಕೊಡುವುದಕ್ಕೆ ಆಗುತ್ತದೆ, ಅಷ್ಟೆ. ಇದರಿಂದ ಏನು ಪ್ರಯೋಜನ? ಒಬ್ಬಬ್ಬರಿಗೆ ಕೊಡುವುದರಿಂದ ಎಲ್ಲಾ ಜನರನ್ನೂ ಸಮಾಧಾನ ಮಾಡಿದಂತಾಗುತ್ತದೆಯೇ? ಮಾನ್ಯ ಸಚಿವರು ಇದನ್ನು ಗಮನದಲ್ಲಿಟ್ಟುಕೊಂಡು ಎಲ್ಲರಿಗೂ ಸಹಾಯ ಮಾಡುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ: ತುಂಗಭದ್ರಾ ಹೈಡ್ರೊ ಎಲೆಕ್ಟ್ರಿಕ್ ಪ್ರಾಜೆಕ್ಟ್ ತೀವ್ರದಲ್ಲಿ ಕಾರ್ಯಗತವಾಗುತ್ತದೆ ಎಂದು. ನುಮಾರು ಒಂದು ವರ್ಷದಿಂದಲೂ ಆಗುತ್ತಲೇ ಇದೆ. ಆದರೆ ಇದುವರೆಗೂ ಪೂರ್ತಿಯಾಗಿ ಕಾರ್ಯಗತವಾಗಲೇ ಇಲ್ಲ. ಇವೊತ್ತು ಪವರ್ ಇಲ್ಲದ ಕಾರಣ ದೊಡ್ಡ ದೊಡ್ಡ ಚಿನ್ನದ ಗಣಿಗಳನ್ನು ನಡೆಸ

(ಶ್ರೀಮತಿ ಬನವರಾಜೇಶ್ವರಿ)

ವುದಕ್ಕೆ ಬಹಳ ಕಷ್ಟವಾಗುತ್ತಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ನುಮಾರು 360 ಟಿಕ್ ಕ್ರಷ್ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದರು. ಆರೀತಿ ಕ್ರಷ್ ಮಾಡುವುದಕ್ಕೆ ಕರೆಂಟ್ ಇಲ್ಲದ ಕಾರಣ ಆ ಕೆಲಸ ಹಾಗೆಯೇ ನಿಂತಿತು. ಈಗ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ನಾಪರ ಟಿಕ್ಕ್ರಷ್ ಮಾಡಬೇಕೆಂಬುದಾಗಿ ಒಂದು ಅಭಿಪ್ರಾಯ ವನ್ನು ಇಟ್ಟುಕೊಂಡಿದ್ದಾರೆ. ಈಗಲೂ ಪವರ್ ಇಲ್ಲದೆ ಅನನುಕೂಲವಾಗಿರುವುದರಿಂದ ಅಲ್ಲಿನ ಮ್ಯಾನೇಜಿಂಗ್ ಕಮಿಟಿಯವರು ಪದೇ ಪದೇ ಬಂದು ಆ ಬಗ್ಗೆ ಪ್ರೆಸ್ ಮಾಡುತ್ತಿದ್ದಾರೆ. ಇದರಿಂದ ತೀವ್ರ ಗತಿಯಿಂದ ತೊಂದರೆ ಬಂದಿದೆಯೆಂದು ನಾನು ಕೇಳಿದ್ದೇನೆ. ಹಡಗು ಮುಳುಗಿಹೋಯಿತು. ಯಾವ ಸಾಮಾನುಗಳೂ ಅಲ್ಲಿಂದ ಬರಲಿಲ್ಲ ಎಂದು ಸರ್ಕಾರ ದವರು ಹೇಳುತ್ತಾರೆ. ಒಟ್ಟಿನಲ್ಲಿ ತುಂಗಭದ್ರಾ ಜರಾಶಯದಿಂದ ಉತ್ಪನ್ನವಾಗತಕ್ಕ ವಿದ್ಯುಚ್ಛಕ್ತಿ ನಮ್ಮ ಕಡೆಗೆ ಆದಷ್ಟು ಜಾಗ್ರತೆ ಸಿಕ್ಕುವಂತೆ ಮಾನ್ಯ ಸಚಿವರು ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನು ಮೆಡಿಕಲ್ ಬಗ್ಗೆ ಹೇಳುವುದಾದರೆ ಇವೊತ್ತಿನ ವರೆಗೂ ಡಾಕ್ಟರುಗಳ ಅಭಾವ ಬಹಳವಾಗಿ ಇದೆ ಯೆಂಬುದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಡಾಕ್ಟರುಗಳ ಅಭಾವವನ್ನು ಕಡಮೆಮಾಡುವುದಕ್ಕೆ ಸರ್ಕಾರದವರು ಸೂಕ್ತವಾದ ಕ್ರಮಗಳನ್ನು ತ್ವರಿತ ವಾಗಿ ತೆಗೆದುಕೊಳ್ಳಬೇಕು. ಡಾಕ್ಟರುಗಳು ಇದ್ದರೆ ಔಷಧಿ ಇಲ್ಲ; ಔಷಧಿ ಇದ್ದರೆ ಡಾಕ್ಟರುಗಳಿಲ್ಲ. ಇಂಥಾದ್ದನ್ನು ಮಾನ್ಯ ಸಚಿವರು ಸರಿಪಡಿಸುತ್ತಾರೆಂದು ನಾನು ನಂಬಿದ್ದೇನೆ. ನಮ್ಮ ಚಿನ್ನಥಗಣಿ ಕೇವಲ ಪ್ರೈವೇಟ್ ಏಜನ್ಸಿಯೇ ಅಲ್ಲ. ಸರ್ಕಾರದ ಶೇಕಡ 85 ಷೇರುಗಳು ಅದರಲ್ಲಿವೆ. ಕೇವಲ ಶೇಕಡ 15 ಭಾಗ ಮಾತ್ರ ಪ್ರೈವೇಟ್ ಷೇರುಗಳಿವೆ. ಅಲ್ಲಿ ಒಂದು ಆಸ್ಪತ್ರೆ ಇತ್ತು. ಹಿಂದೆ ಹೈದರಾಬಾದ್ ಸರ್ಕಾರದವರು ಅನೇಕ ಇನಾಕ್ಯುಲೇಷನ್ಸ್ ಕೊಡಲು ತಕ್ಕ ಸೌಕರ್ಯಗಳನ್ನು ಅಲ್ಲಿ ಕೊಡುತ್ತಿದ್ದರು. ಈಗಲೂ ಕೊಡುತ್ತಿದ್ದಾರೆ. ಹೊರಗಿನಿಂದ ಬರತಕ್ಕ ನಾನ್-ಎಂಪ್ಲಾಯೀಸಿಗೆ ಚೆನ್ನಾಗಿ ಚಿಕಿತ್ಸೆ ಕೊಡುವ ಸಲು ವಾಗಿ ಗ್ರ್ಯಾಂಟು ಕೊಡುತ್ತಿದ್ದಾರೆ. ತೊಂದರೆ ತೆಗೆದು ಕೊಂಡು ಗ್ರ್ಯಾಂಟು ೧,೫೦೦ ರೂಪಾಯಿಗಳಾಗಿ ಮಾಡ ಬೇಕು. ಈಗ ಕೊಡತಕ್ಕ ಗ್ರ್ಯಾಂಟು ೫೦೦ ರೂಪಾಯಿ ಗಳು ಸಾಲುವುದಿಲ್ಲ ಎಂದು ನಾನು ಹೇಳಿದಮೇಲೆ ಹೇಳದೆ ಕೇಳದೆ ಇದ್ದಂಥ 500 ರೂಪಾಯಿಗಳ ಗ್ರ್ಯಾಂಟನ್ನೂ ಸಹ ಬಂದ್ ಮಾಡಿದ್ದಾರೆ. ಯಾವ ಕಾರಣದಿಂದ ಬಂದ್ ಮಾಡಿದರೋ ಗೊತ್ತಿಲ್ಲ. ಕೆಲವು ಜಿಲ್ಲೆಗಳಲ್ಲಿ ನೋಡಿದರೆ ಎಂಪ್ಲಾಯೀಸ್‌ಗಿಂತ ನಾನ್-ಎಂಪ್ಲಾಯೀಸಿಗೆ ಹೆಚ್ಚಿಗೆ ನೋಡುತ್ತಿದ್ದಾರೆ. ಈಗಿನ ಪರಿಸ್ಥಿತಿಯಲ್ಲಿ ಹೊಸದಾಗಿ ಆಸ್ಪತ್ರೆಗಳನ್ನು ಕೊಡುವ ಬದಲು ಇರತಕ್ಕ ಆಸ್ಪತ್ರೆಗಳಿಗೆ ಹೆಚ್ಚು ಹೆಚ್ಚು ಗ್ರ್ಯಾಂಟನ್ನು ಕೊಟ್ಟು ಅನುಕೂಲ ಮಾಡುವುದು ಒಳ್ಳೆಯದಲ್ಲವೇ ? ಅದೇ ಸರ್ಕಾರದ ಕರ್ತವ್ಯ. ಇದಕ್ಕೆ ಕಾರಣವೇನೆಂಬುದನ್ನು ಕಂಡುಹಿಡಿಯಬೇಕು. ಆಸ್ಪತ್ರೆಗೆ ರೇಡಿ ಡಾಕ್ಟರುಗಳನ್ನು ಕೊಟ್ಟು ಅಲ್ಲಿಗೆ ದೂರದಿಂದ ಬರತಕ್ಕ ನಾನ್-ಎಂಪ್ಲಾಯೀಸಿಗೆ ಅನು ಕೂಲ ಮಾಡಿಕೊಡಲು ತಕ್ಕ ಸೌಕರ್ಯ, ವ್ಯವಸ್ಥೆಗಳನ್ನು ಕಲ್ಪಿಸಿ ಕೊಡಬೇಕು. ಇನ್ನೊಂದು ವಿಷಯ. ಈಗ ಮೆಡಿಕಲ್ ಇರಾಖೆ ಮತ್ತು ಪಬ್ಲಿಕ್ ಹೆಲ್ತ್ ಇರಾಖೆ ಎಲ್ಲಾ ಡಿ.ಎಚ್.ಓ. ಹೋಗಿ ಕೇವಲ ಹೆಲ್ತ್ ಯೂನಿಟ್ಟು ಗಳನ್ನೂ, ಮೆಡಿಕರ್ ಆಫೀಸರುಗಳು ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಗಳನ್ನೂ ಎಜಿಟ್ ಮಾಡುವುದು ಸರಿಯಲ್ಲ. ಒಬ್ಬರಿಗೇ ಎರಡು ಶಾಖೆಗಳನ್ನೂ ವಹಿಸಿ. ಹೆಲ್ತ್ ಇರಾಖೆ ಇಲ್ಲದಿದ್ದರೆ ಮೆಡಿಕರ್ ಇರಾಖೆಗೆ ಕೊಡಿ. ಆರೀತಿ ಮಾಡದೆ ಒಂದುಕಡೆ ಹೆಲ್ತ್ ಯೂನಿಟ್ಟುಗಳನ್ನು ಎಜಿಟ್ ಮಾಡುವುದು, ಮತ್ತೊಂದು ಕಡೆ ಆಯು ರ್ವೇದ ಯುನಾನಿ ಡಿಸ್‌ಪೆನ್ಸರೀಸನ್ನು ಎಜಿಟ್ ಮಾಡುವುದು ಈ ವ್ಯವಸ್ಥೆ ನನಗೆ ಅಷ್ಟಾಗಿ ಸರಿಕಾಣು ವುದಿಲ್ಲ. ತಾವು ದಯಮಾಡಿ ಈ ಕಾರ್ಯವನ್ನು ಒಬ್ಬರಿಗೇ ಸೂಪರ್‌ವೈಜ್ ಮಾಡುವುದಕ್ಕೆ ವಹಿಸುವುದು ಒಳ್ಳೆಯದು ಎಂದು ನನಗೆ ಕಾಣಿಸುತ್ತದೆ.

ಇನ್ನು ಅರಣ್ಯ ಇರಾಖೆಯ ಬಗ್ಗೆ ಹೇಳುವುದಾದರೆ ನಮ್ಮ ಹೈದರಾಬಾದ್ ಕರ್ಣಾಟಕದ ರಾಯಚೂರಿನಲ್ಲಿ ಬೇಕಾದಷ್ಟು ಅರಣ್ಯಕ್ಕೆ ಸಂಬಂಧಪಟ್ಟ ಜಮೀನುಗಳಿವೆ. ನುಮಾರು ಹತ್ತು ಇಪ್ಪತ್ತು ವರ್ಷಗಳಿಂದ ಅನೇಕ ಜಮೀನಿಲ್ಲದವರು, ಗುರ್ಡ ಗಾಡಿನ ಜನರು, ಹರಿಜನರು ಮತ್ತು ಗಿರಿಜನರು ಕಷ್ಟಪಟ್ಟು ಕಲ್ಲು, ಮುಳ್ಳು ತೆಗೆದು ಹಸನಾಗಿ ಮಾಡಿಕೊಂಡು ಜಮೀನು ಮಾಡಿ ಕೊಂಡಿದ್ದಾರೆ. ಒಂದು ಕಡೆ ಸರ್ಕಾರದವರು ಭೂಮಿ ಇಲ್ಲದವರಿಗೆ ಭೂಮಿ ಕೊಡಬೇಕೆಂದು ಹೇಳುತ್ತಾರೆ. ನುಮಾರು ೧೦-೨೦ ವರ್ಷಗಳಿಂದ ವ್ಯವಸಾಯ ಮಾಡುತ್ತಾ ಇರತಕ್ಕ ಜಮೀನ್‌ದಾರರನ್ನು ಒಂದು ಕಡೆಯಿಂದ ಎವಿಕ್ಟ್ ಮಾಡಬೇಕೆಂದು ಹೇಳುತ್ತಿದ್ದಾರೆ. ನಮ್ಮಲ್ಲಿ ಕಾಡು ಬೆಳೆಸುವುದಕ್ಕೆ ಬೇಕಾದಷ್ಟು ಜಮೀನು ಇದೆ. ಜಮೀನು ಮಾಡತಕ್ಕವರು ಏತಕ್ಕೆ ಇಷ್ಟು ಜಮೀನನ್ನು ಹಾಗೆಯೇ ಬಿಡಬೇಕೆಂದು ಕೇಳುತ್ತೇನೆ. ನಮ್ಮಲ್ಲಿ ತೆಂಗು, ತೇಗ ಬೆಳೆಯು ವುದಿಲ್ಲ. ಸಾಮಾನ್ಯವಾಗಿ ೧೪ ಇಂಚುಗಳಷ್ಟು ಸರಾಸರಿ ಮಳೆ ಸಹ ಬೀಳುವುದಿಲ್ಲ. ಹೈದ ರಾಬಾದ್ ಸರ್ಕಾರದವರು ಲಕ್ಷಾಂತರರೂಪಾ ಯಿಗಳನ್ನು ಖರ್ಚು ಮಾಡಿ ಕಾಡನ್ನು ಬೆಳೆಸುತ್ತಾರೆ. ನುಮಾರು ಹತ್ತು ಇಪ್ಪತ್ತು ವರ್ಷಗಳಿಂದಲೂ ಜಮೀನು ಮಾಡಿಕೊಂಡು ಇರುವವರ ಮೇಲೆ ಪ್ರತಿಸಾರಿಯೂ ಪೆನಲ್ಟೀಸ್ ಬೇರೆ ಹಾಕುತ್ತಾ ಇದ್ದಾರೆ. ಇದರಿಂದ ಅವರಿಗೆ ಹೊರರಾರದಷ್ಟು ತ್ರಾಸಾಗುತ್ತದೆ. ಒಂದು ಕಡೆ ರೆವಿನ್ಯೂ ಇರಾಖೆಯವರು ಎವಿಕ್ಟ್ ಮಾಡು ತ್ತಾರೆ; ಪೆನಲ್ಟಿ ಹಾಕುತ್ತಾರೆ. ಒಂದು ಸಾರಿ ಸರ್ಕಾರದವರು ಏನಾದರೂ ಈ ಬಗ್ಗೆ ಅಂತ್ಯ ತೀರ್ಮಾನ ತೆಗೆದುಕೊಂಡು ಆ ಪ್ರಕಾರವೇ ಜಮೀನು ಇಲ್ಲದವರಿಗೆ ಜಮೀನುಗಳ ಪಟ್ಟಾ ಕೊಡುವಹಾಗೆ ಏರ್ಪಾಡುಮಾಡಿಕೊಡಬೇಕು. ಇದು ಬಹಳ ದೀರ್ಘ ವಾಗಿ ಆಲೋಚನೆ ಮಾಡತಕ್ಕ ವಿಷಯವಾಗಿದೆ. ಈ ವಿಷಯವನ್ನು ಚೆನ್ನಾಗಿ ಗಮನಿಸಬೇಕೆಂದು ಸಂಬಂಧ ಪಟ್ಟ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಆತರೈಜ್ಡ್ ಕಲ್ಟಿವೇಷನ್ನಿಗೂ ಕೊಡಬೇಕೋ ?

ಶ್ರೀಮತಿ ಬನವರಾಜೇಶ್ವರಿ.—ಅಆತರೈಜ್ಡ್ ಕಲ್ಟಿವೇಷನ್ನಿನಲ್ಲಿ ಹತ್ತು ಹದಿನೈದು ವರ್ಷಗಳಿಂದ ಜಮೀನು ಮಾಡಿಕೊಂಡಿರುವವರಿಗೆ ರೆಗ್ಯುಲರೈಜ್ ಮಾಡಿ ಎಂದು ನಾನು ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಮಗೆ ಬೇಕಾದ್ದು ಅದೇ.

ಶ್ರೀಮತಿ ಬನವರಾಜೇಶ್ವರಿ.—ಇನ್ನು ಫ್ಯಾಮಿಲಿ ರಿಲೀಫಿಗೆ ಕೊಟ್ಟ ಹಣ ಏನೇನೂ ಸಾಲುವುದಿಲ್ಲವೆಂದು ನನಗೆ ಕಾಣುತ್ತದೆ. ಈಗಾಗಲೇ ಮೂರ್ನಾಲ್ಕು ಜಿಲ್ಲೆಗಳಲ್ಲಿ ಬರಗಾಲ ಬಹಳ ಮಟ್ಟಿಗೆ ಆಗಿದೆ. ಇದರಿಂದಾಗಿ ಅಲ್ಲಿ ಹತ್ತಿ, ಬಳ್ಳಿ ಜೋಳ, ಯಾವುದೂ

ಬೆಳೆಯುವುದಿಲ್ಲ ಅದಕ್ಕೆ ಸರ್ಕಾರದವರು ಕೊಟ್ಟಂಥ ಹಣ ಏನೇನೂ ಸಾಲದು. ಈ ನಾಲ್ಕು ತಿಂಗಳಾದ ಮೇಲೆ ಹೆಚ್ಚು ಹೆಚ್ಚಾಗಿ ಹಣವನ್ನು ಒದಗಿಸಿ ಫ್ಯಾಮಿಲ್ ಬರುವ ಪ್ರದೇಶಗಳಿಗೆ ಶಾಶ್ವತ ಪರಿಹಾರವನ್ನು ಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಫ್ಯಾಮಿಲ್ ರಿಲೀಫ್ ವರ್ಕ್ಸ್‌ಗೆ ಹೆಚ್ಚು ಲಕ್ಷ್ಯ ಕೊಟ್ಟು ಫ್ಯಾಮಿಲ್ ರಿಲೀಫ್ ಬೋರ್ಡನ್ನು ರಚನೆ ಮಾಡಬೇಕೆಂದು ಈ ಸಭಾಸದ್ಯರು ಎಷ್ಟೋಸಾರಿ ಒತ್ತಾಯಮಾಡಿ ಹೇಳಿದರೂ ಇದುವರೆಗೂ ಅದು ಕಾರ್ಯಗತವಾಗಲಿಲ್ಲವೆಂದು ಹೇಳುತ್ತೇನೆ. ಈ ವಿಷಯದಲ್ಲಿ ಸರ್ಕಾರದವರು ಹೆಚ್ಚು ಲಕ್ಷ್ಯ ಕೊಡಬೇಕೆಂದು ಹೇಳಿ ಇದನ್ನು ಅನುಮೋದಿಸುತ್ತಾ, ಅಧ್ಯಕ್ಷರನ್ನು ಅಭಿನಂದಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

Business of the House

Mr. SPEAKER.—I wish to inform the House, as I have already stated that the debate will conclude to-day. I would like to know from the Government what time they will require for reply so that I may adjust the time.

Sri S. R. KANTHI.—So far as I am concerned, I do not take much time. But other Ministers will take some time. It may be two hours.

Mr. SPEAKER.—It will close at 6 o'clock. So, till 4 o'clock, I will allow the debate.

DEMANDS FOR GRANTS IN ADVANCE (VOTE ON ACCOUNT) FOR THE YEAR 1962-63

ಶ್ರೀ ಬಿ. ಹುಚ್ಚೇಗೌಡ.—ಮಾನ್ಯ ಸಭಾಪತಿಗಳೇ, ಈ ದಿವಸ ಈ ಅಂದಾಜು ಪ್ರತಿಕೆಯ ಮೇಲೆ ಮಾತನಾಡ ಬೇಕಾದರೆ ನಮಗೆ ಒಂದು ಅನಾನುಕೂಲವಿದೆ. ಈಗ ತಾನೇ ಮೂರನೆಯ ಮಹಾಚುನಾವಣೆ ನಡೆದಿದೆ. ಹೊಸ ಮಂತ್ರಿ ಮಂಡಲ ಬಂದಿದೆ. ಬಂದ ಮೇಲೆ ಈ ಮಂತ್ರಿ ಮಂಡಲದವರ ನೀತಿಯನ್ನು ಮತ್ತು ಅವರ ಕಾರ್ಯ ಕ್ರಮದ ಒಂದು ತತ್ವವನ್ನು ಅರಿತು ನಾವು ಮಾತನಾಡಿದ್ದರೆ ಚೆನ್ನಾಗಿತ್ತು. ಏಕೆಂದರೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮುಂಚೆಯಾಗಿದ್ದರೆ ನಮಗೆ ಅವರ ತತ್ವ ದೃಷ್ಟಿಯಿಂದ ಯಾವ ಯಾವ ಬದಲಾವಣೆಯನ್ನು ತೋರಿಸುತ್ತಿದ್ದರು ಎಂಬುದನ್ನು ನೋಡಿ ಮಾತನಾಡುವುದಕ್ಕೆ ಅನುಕೂಲವಾಗಿತ್ತು. ಈಗ ಅಂತಹ ಒಂದು ಅನನುಕೂಲದ ಪರಿಸ್ಥಿತಿಯಲ್ಲಿ ಮಾತನಾಡಬೇಕಾಗಿದೆ.

ಸ್ವಾಮಿ, ಈಗ ಇನ್ನೂ ಮಂತ್ರಿ ಮಂಡಲ ರಚನೆ ಪೂರ್ಣವಾಗಿಲ್ಲ. ಏಕೆಂದರೆ ಮೊದಲನೆಯಾದಾಗಿ ನಮಗೆ ಇರತಕ್ಕ ಒಂದು ಮುಖ್ಯವಾದ ಅನನುಕೂಲ ಈ ಮಂತ್ರಿ ಮಂಡಲ ರಚನೆ ನಿರ್ಧಾರವಾಗುತ್ತಿರುವುದು. ಚುನಾವಣೆಯಾಗಿ ಒಂದು ತಿಂಗಳಾದರೂ ಇನ್ನೂ ಮಂತ್ರಿ ಮಂಡಲ ರಚನೆ ಯಾಗದೆಯೇ ಸರ್ಕಾರದ ಆಡಳಿತ ಯಂತ್ರ ನಡೆಯುತ್ತಿರುವುದರಿಂದ ದೇಶದಲ್ಲಿ ಜನಗಳು ಬಹಳ ಮಟ್ಟಿಗೆ ಸರ್ಕಾರದ ವಿಚಾರದಲ್ಲಿ ಒಂದು ಉದಾಸೀನ ಮನೋಭಾವವನ್ನು ತಾಳುತ್ತಿದ್ದಾರೆ. ಏತಕ್ಕೆ ಈ ರೀತಿ ಮಾತನಾಡುತ್ತಿದ್ದೇನೆಂಬುದನ್ನು ತಮ್ಮ ಮುಂದೆ ಅರಿಕೆ ಮಾಡಿ ಕೊಳ್ಳುತ್ತೇನೆ. ನಮಗೆ ದೇಶ ಮುಖ್ಯ.

1-30 P.M.

ಯಾವ ಸರ್ಕಾರ ಆಗಲಿ ಅದು ತನ್ನ ಘನತೆ, ಗೌರವಗಳನ್ನು ಹೆಚ್ಚಿಸಿಕೊಂಡು ಬರಬೇಕೆನ್ನುವುದು ಒಂದು. ಅಷ್ಟೇ ಅಲ್ಲ; ಹೊರಗಡೆಯೂ ಕೂಡ ಮೈಸೂರು ದೇಶ ಮಾದರಿ ದೇಶ ಎಂದು ಅನಿಸಿಕೊಳ್ಳಬೇಕು. ನಾವು ಪ್ರತಿ ಪಕ್ಷದಲ್ಲಿ ಇದ್ದರೂ ಕೂಡ ಮೈಸೂರು ಎಂದರೆ ಅವರು ಮಾಡುವ ತಪ್ಪಿಗೆ ನಮಗೂ ಕೆಟ್ಟ ಹೆಸರು ಬರುತ್ತದೆ ಎಂದು ನಮಗೂ ಭಯವಿದೆ. ಅವರು ಮಾಡಿದ ತಪ್ಪಿಗೂ ಕೂಡ ನಾವು ಈ ಸಭೆಯಲ್ಲಿ ಭಾಗಿಗಳಾಗಿದ್ದೇವೆ. ಆದ್ದರಿಂದ ನಮ್ಮ ದೇಶದ ಘನತೆ, ಗೌರವಗಳನ್ನು ಹೆಚ್ಚಿಸುವ ರೀತಿಯಲ್ಲಿ ಆ ಪಕ್ಷದವರು ಸರ್ಕಾರ ನಡೆಸಲಿ ಎಂದು ನಮ್ಮ ಭಾವನೆ ಇರುವಾಗ ಅವರು ಇನ್ನೂ ಸರಿಯಾದ ಒಂದು ಮಂತ್ರಿ ಮಂಡಲ ರಚನೆ ಮಾಡಿಲ್ಲ. ಒಂದು ತಿಂಗಳು ತೆಗೆದುಕೊಂಡಿದ್ದಾರೆ. ಮದರಾಸಿನಲ್ಲಿ ಎರಡು ದಿವಸಗಳಲ್ಲಿ ಮಂತ್ರಿ ಮಂಡಲ ರಚನೆ ಮಾಡಿದರು, ಕೇಂದ್ರ ಸರ್ಕಾರ ಅವರ ಮೇಲೆ ಪ್ರಭಾವ ಬೀರುವ ಹಾಗೇ ಇಲ್ಲ. ನಮ್ಮ ರಾಜ್ಯದಲ್ಲಿ ನಮ್ಮ ವ್ಯಾಜ್ಯ ಬಗೆಹರಿಸಿಕೊಳ್ಳುವುದಕ್ಕಾಗದೇ ಒಂದು ಅರೋಕೇಷ್ಟ್ ತೆಗೆದುಕೊಳ್ಳಿ, ಹಣಕಾಸಿನ ವಿಚಾರ ತೆಗೆದುಕೊಳ್ಳಿ. ಪ್ರತಿಯೊಂದಕ್ಕೂ ಅಲ್ಲಿ ಬೇಡಿಕೆಗೆ ಹೋಗಬೇಕು. ನದೀ ನೀರಿನ ವಿಷಯದಲ್ಲೂ ಸಹ ಅನಡ್ಡೆ. ಅದರಲ್ಲೂ ಘಂಟಾ ಘೋಷವಾಗಿ ಅಂಧ್ರದವರು ಇವೊತ್ತು ತಮಗೆ ಯಾವುದು ಬೇಕೋ ಅದನ್ನು ಕಡ್ಡಾಯವಾಗಿ ತೆಗೆದು ಕೊಂಡೇ ತೆಗೆದು ಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಹೆದರಿಸಿ ತೆಗೆದು ಕೊಳ್ಳುವಷ್ಟು ಪ್ರಭಾವ ಅವರು ಬೀರುತ್ತಾರೆ. ಮದರಾಸಿನವರು ಕೂಡ ಅದೇ ರೀತಿಮಾಡುತ್ತಾರೆ. ಮಹಾರಾಷ್ಟ್ರದವರೂ ಕೂಡ ಅಷ್ಟೆ. ಮೂರು ಕಡೆಯವರೂ ಕೂಡ ನಮ್ಮ ಮೇಲೆ ಆಕ್ರಮಣ ನಡೆಸುತ್ತಾ ಇದ್ದಾರೆ. ಅವರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ತೋರಿಸುತ್ತಾ ಇದ್ದಾರೆ. ನಮ್ಮಲ್ಲಿರತಕ್ಕ ಈ ಸರ್ಕಾರದ ಅದಕ್ಷತೆ ಮತ್ತು ಇದರಲ್ಲಿರತಕ್ಕ ಗ್ರೂಪ್ಸ್‌ಈ ವ್ಯಾಜ್ಯದಲ್ಲಿ ಮಂತ್ರಿ ಮಂಡಲ ರಚಿಸುವುದನ್ನೇ ತಿಂಗಳುಗಟ್ಟಲೆ ಮುಂದುವರಿಸುತ್ತಾ ಇದ್ದೀರಿ. ಇದರಿಂದ ಕೊನೆಗೆ ಏನಾಗುತ್ತದೆ ಎಂದರೆ ಆ ಗ್ರೂಪ್‌ನವರನ್ನು ತೆಗೆದು ಕೊಳ್ಳುವುದಕ್ಕಾಗುವುದಿಲ್ಲ, ಈ ಗ್ರೂಪ್‌ನವರನ್ನು ತೆಗೆದು ಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಾ ಅವರು ಅರ್ಧ, ಇವರು ಅರ್ಧ ಸೇರಿಕೊಂಡು ಇನ್ನೊಂದು ಗ್ರೂಪ್ ಆಗುತ್ತದೆ. ಇಂಥಾ ಒಂದು ಸನ್ನಿವೇಶದಲ್ಲಿ ನಾವು ಈ ಸಭೆಯಲ್ಲಿ ಭಾಗವಹಿಸ ಬೇಕಾಗಿದೆಯೆಂದು ಬಹಳ ವ್ಯಸನವಾಗುತ್ತದೆ.

ನಾವು ಸುಖೀ ರಾಜ್ಯ ಬರುತ್ತದೆ, ರಾಮ ರಾಜ್ಯ ಬರುತ್ತದೆ ಎಂದು ತಿಳಿದುಕೊಂಡಿದ್ದೆವು. ಎಲ್ಲ ಜನರಿಗೂ ಅನ್ನ ಬಟ್ಟೆ ಸಿಕ್ಕುತ್ತವೆ; ದೀನದರಿದ್ರರಿಗೆ, ಮುದುಕರು, ಅನಾಥರಿಗೆ, ಇನ್ನೂ ಕೂಡ ಹಿಂದೆ ಬಿದ್ದಿರುವವರಿಗೆ ಸಹಾಯವಾಗುತ್ತದೆ ಎಂದು ಮಾಡಿದ್ದೆವು. ಈಗ ಅವರ ಈ ಬಜೆಟ್‌ನೊಳಗೆ ಅಂಥಾ ವಿಚಾರವೇ ಇಲ್ಲ. ನೆರೆ ರಾಜ್ಯವಾದ ಕೇರಳ ಇದೆ. ಅಲ್ಲಿ "old age pension" sanction ಮಾಡಿದ್ದಾರೆ. ಮದರಾಸಿನಲ್ಲೂ ಇದೇ ರೀತಿ ಮುಂದು ವರಿದಿದ್ದಾರೆ. ಮೈಸೂರಿನಲ್ಲಿ ಏಕೆ ಮಾಡಿಲ್ಲ ಎಂದರೆ ಇವರಲ್ಲಿ ಇರುವ ಕಚ್ಚಾಟವೇ ಕಾರಣ ಮತ್ತೆ ಈ